ಸಾಧ್ಯವಾಯಿತು. ಕೊರಿಯೊಗ್ರಫಿಯನ್ನು ಮೊದಲು ನಾನು ಅರ್ಥೈಸಿ ಕಲಿತುಕೊಂಡು, ನಂತರ ಬೇರೆಯವರಿಗೆ ಕಲಿಸಬೇಕಾದ್ದರಿಂದ ಅದೊಂದು ಸವಾಲೇ ಆಗಿತ್ತು. ಕಥಕ್ ನೃತ್ಯವು ನಮ್ಮ ಗುರುಗಳಿಗೆ ಹೇಗೆ ಪರಂಪರೆಯಿಂದ ಬಂದಿತ್ತೋ ಹಾಗೆಯೇ ನಮಗೂ ಕಲಿಸಿದರು. ಕೊರಿಯೊಗ್ರಫಿ ಎಂಬ ಪರಿಕಲ್ಪನೆ ಆಗೆಲ್ಲ ಇರಲಿಲ್ಲ. ಆ ಮಟ್ಟಿಗೆ ನನ್ನದು ದೀರ್ಘಪ್ರಯಾಣ ಎನ್ನಬೇಕು.

◆ **ನೃತ್ಯದ ಹೊರತಾಗಿ ನಿಮ್ಮ ಹವ್ಯಾಸಗಳೇನು?**

ನೃತ್ಯದ ಹೊರತಾಗಿ ನನಗೆ ಅನೇಕ ಹವ್ಯಾಸಗಳಿವೆ. ಹೂದೋಟ ಮಾಡುವುದು ಬಹಳ ಇಷ್ಟದ ಹವ್ಯಾಸ. ಹೊಸ ನಮೂನೆಯ ಅಡುಗೆ ಮಾಡುವುದು ಬಹಳ ಇಷ್ಟ. ಆದರೆ ಹೊಸ ಪ್ರಯೋಗಗಳ ಅಡುಗೆಯನ್ನೆಲ್ಲ ಹಾಳುಗೆಡವಿ ಪೇಚಾಡಿಕೊಳ್ಳುತ್ತಿದ್ದೆ. ಇಂಥ ಪ್ರಯತ್ನಗಳಿಗೆ ಸಮಯ ಸಿಕ್ಕಿದ್ದೂ ಬಹಳ ಕಮ್ಮಿ. ಓದುವ ಹವ್ಯಾಸಕ್ಕೆ ಇಳಿವಯಸ್ಸಿನಲ್ಲಿ ನನಗೆ ಸಾಕಷ್ಟು ಸಮಯ ಸಿಕ್ಕಿತು. ಆದರೆ ಈಗ ಅದೂ ಸಾಧ್ಯವಾಗುತ್ತಿಲ್ಲ.

◆ **ಸಾಂಪ್ರದಾಯಿಕ ಕಥಕ್ ನೃತ್ಯವನ್ನು ಆಧುನಿಕ ವೇದಿಕೆಗೆ ನೀವು ಪರಿಚಯಿಸಿದ್ದು ಯಾವಾಗ? ಆಗ ನಿಮಗೆ ಎದುರಾದ ಸವಾಲುಗಳೇನು?**

ಇಂಥದ್ದೇ ಒಂದು ದಿನಾಂಕ ಎಂದು ಹೇಳಲಾರೆ. ನಾನು ನೃತ್ಯ ಕ್ಷೇತ್ರವನ್ನು ಪ್ರವೇಶಿಸಿದ ಬಳಿಕ ಪ್ರತಿಯೊಂದು ಕಲಿಕೆಯೂ ಹೊಸದೇ ಆಗಿತ್ತು. ಒಂದಾದ ಮೇಲೆ ಒಂದು ಪ್ರಸ್ತುತಿಯನ್ನು ಸಿದ್ಧಪಡಿಸುತ್ತಾ ನಾನು ಪಯಣಿಸಿದ್ದೇನೆ. ಆದ್ದರಿಂದ ಇದೊಂದು ದೀರ್ಘ ಪ್ರಕ್ರಿಯೆ ಎಂದು ಹೇಳಬಹುದು. ನಾನು 1973ರಲ್ಲಿ ಕೊರಿಯೋಗ್ರಫಿ ಆರಂಭಿಸಿದ್ದು, ಮೊದಲನೆಯ ಪ್ರಸ್ತುತಿ ಧಬ್‌ಕರ್ ಅನ್ನು ಬಹಳಷ್ಟು ಜನ ಪ್ರಶಂಸಿಸಿದರು. ಇದರಿಂದ ನನ್ನ ಆತ್ಮವಿಶ್ವಾಸ ವೃದ್ಧಿಯಾಯಿತು. ಈ ವಿಕಾಸ ಪ್ರಕ್ರಿಯೆಯು ನಿರಂತರವಾಗಿ ಸಾಗಿತು.

◆ **ದೇಶವಿಭಜನೆಯ ಸಂದರ್ಭದ ನೆನಪುಗಳು ನಿಮ್ಮ ಮನದಲ್ಲಿ ದಟ್ಟವಾಗಿ ಇರಬಹುದು?**

ನಾನಾಗ ಇನ್ನೂ ಶಿಕ್ಷಣ ಪೂರೈಸಿರಲಿಲ್ಲ. ನೃತ್ಯವು ನನ್ನ ಮನಸ್ಸಿನಲ್ಲಿ ಇನ್ನೂ ಸ್ಫುಟವಾಗಿ ನಿಂತಿರಲಿಲ್ಲ ಎನಿಸುತ್ತದೆ. ನನ್ನ ಬದುಕು ನೃತ್ಯಕ್ಕೆ ಮೀಸಲಾಗಿರುತ್ತದೆ ಎಂದು ನಾನು ಅಂದುಕೊಂಡಿರಲಿಲ್ಲ. 1937ರಲ್ಲಿ ಎರಡನೇ ಮಹಾಯುದ್ಧವು ಆರಂಭವಾದಾಗ ಆರ್ಮಿ ಕಂಟೋನ್‌ಮೆಂಟ್ ಮತ್ತು ಬ್ಯಾರಕ್‌ಗಳನ್ನು ನಿರ್ಮಿಸಲು ಎಂಜಿನಿಯರ್‌ಗಳನ್ನು ಗೊತ್ತು ಮಾಡಲಾಯಿತು. ಆ ಪಟ್ಟಿಯಲ್ಲಿ ನನ್ನ ಅಪ್ಪ ದಿನಕರ್ ಅವರ ಹೆಸರೂ ಇತ್ತು. ಹಾಗಾಗಿ ನಾವು ಅಲಹಾಬಾದ್‌ಗೆ ಸ್ಥಳಾಂತರಗೊಂಡೆವು. ನಂತರದ ಎರಡು ಮೂರು ವರ್ಷಗಳಲ್ಲಿ ನನ್ನನ್ನು ಲಾಹೋರ್‌ನ ಕ್ವೀನ್ಸ್ ಮೇರಿ ಕಾಲೇಜಿನಲ್ಲಿ ಪ್ರಾಥಮಿಕ ತರಗತಿಗೆ ಸೇರಿಸಿದರು. ಅದು ವಸತಿ ಶಾಲೆ. ಅಲ್ಲಿ ನನಗೆ ನೃತ್ಯ ಕಲಿಸುವುದಕ್ಕೆ ರಾಧೇಲಾಲ್‌ಜೀ ಕೂಡ ಬರುತ್ತಿದ್ದರು. ಲಾಹೋರ್‌ನಲ್ಲಿಯೇ ಅವರಿಗೆ ವಸತಿ ವ್ಯವಸ್ಥೆಯನ್ನು ಅಮ್ಮ ಕಲ್ಪಿಸಿದ್ದರು. ಅಲ್ಲಿ ಅವರು ವಾರಕ್ಕೆರಡು ಬಾರಿ ಶಾಲೆಗೆ ಬಂದು ನನಗೂ ಇತರ ಮಕ್ಕಳಿಗೂ ಕಥಕ್ ಹೇಳಿಕೊಡುತ್ತಿದ್ದರು. ಆ ಕಾಲೇಜು ಸಾಕಷ್ಟು ಸೌಕರ್ಯಗಳಿರುವ ಬೃಹತ್ ಕಾಲೇಜಾಗಿತ್ತು. ಅಲ್ಲಿ ರಾಜಕುಮಾರಿಯರು, ಆಡಳಿತ ವರ್ಗದ ಕುಟುಂಬಗಳಿಂದ ಬಂದ ಮಕ್ಕಳು ಕಲಿಯುತ್ತಿದ್ದರು. ಆಟೋಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಅವಕಾಶ ದೊರೆತದ್ದರಿಂದ ನಾನು ಹಾಕಿ ಕಲಿತೆ. ಸಿಖ್, ಹಿಂದೂ, ಮುಸ್ಲಿಮ್ ಕುಟುಂಬಗಳ ಮಕ್ಕಳು ಅಲ್ಲಿ ತಮ್ಮ ತಮ್ಮ ಪ್ರಾರ್ಥನೆಗಳನ್ನು ಹೇಳಬಹುದಿತ್ತು. ಬಹಳ ಸೆಕ್ಯುಲರ್ ವಾತಾವರಣದ ಕಾಲೇಜಾಗಿತ್ತು. ಅಲ್ಲಿ ಆಸಕ್ತಿಯಿದ್ದರೆ ಏನನ್ನು ಬೇಕಾದರೂ ಕಲಿಯಬಹುದಿತ್ತು. ಅಥವಾ ಏನೂ ಕಲಿಯದೇ ಸುಮ್ಮನೇ ಗೊಣಗುತ್ತ ಇರಲೂಬಹುದಾಗಿತ್ತು.

ಅದೇ ವಸತಿ ಶಾಲೆಯಲ್ಲಿರುವಾಗ, ಅಂದರೆ ನನಗೆ 14 ವರ್ಷವಿದ್ದಾಗ, ಅಮ್ಮ ತೀರಿಕೊಂಡ ಸುದ್ದಿಯನ್ನು ಪ್ರಿನ್ಸಿಪಾಲ್ ನನಗೆ ಹೇಳಿದರು. ನಾನು ರೈಲಿನಲ್ಲಿ ಮೂರು ದಿನಗಳ ಕಾಲ ಪ್ರಯಾಣ ಮಾಡಿ ಮನೆ ತಲುಪಿದೆ. ಅಲ್ಲಿ ಎಲ್ಲವೂ ಬದಲಾಗಿತ್ತು. ಅಮ್ಮ ಹೊರಟುಹೋಗಿದ್ದಳು. ಅಮ್ಮ ಇರುವಾಗ ನಾನು ಅಪ್ಪನಿಗೆ ಅಂಟಿಕೊಂಡೇ ಇದ್ದೆ. ಆದರೆ ಅವತ್ತು ಅಪ್ಪ ನನ್ನನ್ನು ಅಪ್ಪಿಕೊಂಡರೂ, ಯಾಕೋ ದೂರವಿದ್ದಂತೆ ಭಾಸವಾಯಿತು. ಅಮ್ಮ ತೀರಿದ ಮೇಲೆ ನಾನು ಅಮ್ಮನನ್ನು ವಿಪರೀತವಾಗಿ ಪ್ರೀತಿಸಲು ಶುರು ಮಾಡಿದೆ. ಅಮ್ಮ ಬಾಂಬೆ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಟೆನ್ನಿಸ್ ಚಾಂಪಿಯನ್ ಆಗಿದ್ದಳು. ನನ್ನೊಳಗೆ